# **ವಿಶ್ವ ವನ್ಯಜೀವಿ ದಿನಾಚರಣೆ**

**ಸ್ಥಳ: ಬಾಲವನ, ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ಮುಂಭಾಗ, ತೀರ್ಥಹಳ್ಳಿ ರಸ್ತೆ, ಕೊಪ್ಪ**

**ದಿನಾಂಕ:03-03-2019**

" ಪ್ರಕೃತಿಯಿಂದ, ವನ್ಯಜೀವಿಗಳಿಂದ ನಾವು ಬಹಳಷ್ಟು ಉಪಯೋಗಗಳನ್ನು ಪಡೆದಿದ್ದೇವೆ. ಆದರೆ, ನಾವು ನಮ್ಮ ಜವಾಬ್ದಾರಿಯನ್ನು ಮರೆತು ಕೃತಘ್ನರಾಗಿದ್ದೇವೆ. ಈ ವನ್ಯಜೀವಿ ದಿನಾಚರಣೆ ನಮ್ಮ ಜವಾಬ್ದಾರಿಯನ್ನು ನೆನಪಿಸುವಂತಹ ನಿಟ್ಟಿನಲ್ಲಿ ಒಂದು ಪ್ರಯತ್ನವಾಗಿದೆ" ಎಂದು ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನ್ನಾಡಿದ ಅರಣ್ಯ ಇಲಾಖೆಯ ನೌಕರರಾದ ಶ್ರೀ ಎಂ.ಆರ್.ರಮೇಶ್ ಇವರು ತಿಳಿಸಿದರು.

ಮುಂದುವರಿದು ಮಾತನ್ನಾಡಿದ ಅವರು " ವಿಶ್ವಸಂಸ್ಥೆಯ ಸಾಮನ್ಯ ಸಭೆಯು ದಿನಾಂಕ: 03-03-1973 ರಂದು ಸಭೆ ಸೇರಿ ಅಳಿವಿನಂಚಿನಲ್ಲಿರುವ ಪ್ರಕೃತಿಯ ಸಸ್ಯ, ಪ್ರಾಣಿಗಳಾದಿಯಾಗಿ ಎಲ್ಲಾ ಪ್ರಭೇದಗಳ ಸಂರಕ್ಷಣೆಗೆ ನಿರ್ಣಯವೊಂದನ್ನು ಅಂಗೀಕರಿಸಿತು. ಈ ಮಹತ್ವದ ನಿರ್ಣಯದ ನೆನಪಿಗಾಗಿ ಪ್ರತೀ ವರ್ಷ ಆದಿನ ವಿಶ್ವ ವನ್ಯಜೀವಿ ದಿನಾಚರಣೆಯನ್ನು ಆಯೋಜಿಸಲು ದಿನಾಂಕ:20-12-2012ರಂದು ನಡೆದ ವಿಶ್ವಸಂಸ್ಥೆಯ 68ನೇ ಅಧಿವೇಶನದಲ್ಲಿ ನಿರ್ಣಯವನ್ನು ಕೈಗೊಳ್ಳಲಾಯಿತು. ಸಸ್ಯ ಅಥವಾ ಪ್ರಾಣಿಗಳು ಮಾನವ ಜೀವನದಲ್ಲಿ ಪ್ರಮುಖ ಪಾತ್ರವನ್ನುವಹಿಸುತ್ತವೆ. ಆದರೆ, ಪ್ರಕೃತಿಯ ಒಂದು ಭಾಗ ಮಾತ್ರ ಆಗಿರುವ ಮಾನವನ ದುರಾಸೆ ಅವುಗಳನ್ನು ಅಳಿವಿನಂಚಿಗೆ ತಂದು ನಿಲ್ಲಿಸಿವೆ. ನಾವು ಎಚ್ಚರಿಕೆ ವಹಿಸದಿದ್ದಲ್ಲಿ ಪ್ರಕೃತಿಯು ಸಮತೋಲನವನ್ನು ಕಳೆದುಕೊಳ್ಳಲು ನಾವೇ ಹೊಣೆಗಾರರಾಗುತ್ತೇವೆ. ನಮ್ಮ ಮುಂದಿನ ಪೀಳಿಗೆಗೆ ಪ್ರಕೃತಿಯನ್ನು ಸುಸ್ಥಿರವಾಗಿ ಉಳಿಸಿಕೊಳ್ಳಬೇಕಾದ ಪರ್ವಕಾಲದಲ್ಲಿ ನಾವಿದ್ದೇವೆ. ಈ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ, ಮುಖ್ಯವಾಗಿ ಮಕ್ಕಳಲ್ಲಿ ವನ್ಯಜೀವಿಗಳ ಬಗ್ಗೆ ಕುತೂಹಲ, ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ" ಎಂದು ಅವರು ನುಡಿದರು.

ಕಾರ್ಯಕ್ರಮದಲ್ಲಿ ಕೊಪ್ಪ ವಲಯ ಅರಣ್ಯಾಧಿಕಾರಿಯಾದ ಪ್ರವೀಣ್‌ಕುಮಾರ್, ವಿಭಾಗ ಕಛೇರಿಯ ಪತ್ರಾಂಕಿತ ವ್ಯವಸ್ಥಾಪಕರಾದ ಶ್ರೀ ನವೀನ್ ಕುಮಾರ್, ಅನೇಕ ಕಾರ್ಯನಿರ್ವಾಹಕ ಹಾಗೂ ಕಚೇರಿ ಸಿಬ್ಬಂದಿಗಳು, ಬಾಳಗಡಿ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಂಗವಾಗಿ ಜಾಥಾ, ಮಕ್ಕಳೊಂದಿಗೆ ಸಂವಾದವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ "ಇನ್ನುಮುಂದೆ ನಾವು ಪ್ರಕೃತಿಗೆ ಹೊರೆಯಾಗದೆ ಪ್ರಕೃತಿಗೆ ಪೂರಕವಾಗಿ, ಪ್ರಕೃತಿಯೊಂದಿಗೆ ಬೆರೆತು ಬದುಕುತ್ತೇವೆ" ಎಂಬ ವಚನವನ್ನು ಮಕ್ಕಳಿಂದ ಪಡೆಯಲಾಯಿತು. ಸಿಹಿ ಹಂಚಿಕೆಯೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

**ಉಪ ಅರಣ್ಯ ಸಂರಕ್ಷಣಾಧಿಕಾರಿ,**
**ಕೊಪ್ಪ ವಿಭಾಗ, ಕೊಪ್ಪ.**